# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,**
**ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನ ಉಪ ವಿಭಾಗ, ಬಸವೇಶ್ವರ ಲೇಔಟ್, 3ನೇ ಮುಖ್ಯರಸ್ತೆ, ಕೈಲಾಶೇಶ್ವರ ದೇವಸ್ಥಾನ ಹಿಂಭಾಗ ಅತ್ತಿಗುಪ್ಪೆ, ಬೆಂಗಳೂರು-40,**

---

**ಸಂಖ್ಯೆ: ಸ.ಕಾ.ನಿ.ಅ/ಗಾ.ಅ/ಪಿಆರ್/332/2020-21** **ದಿನಾಂಕ:23-11-2020**

## ದಿನಾಂಕ:23/11/2020 ರಂದು ವಾರ್ಡ ಸಂಖ್ಯೆ:132 ಅತ್ತಿಗುಪ್ಪೆ ವಾರ್ಡ ಸಮಿತಿ ಸಭೆ ನಡವಳಿಗಳು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಚುನಾಯಿತ ಪ್ರತಿನಿಧಿಗಳ ಅಧಿಕಾರ ಅವಧಿಯು ಮುಕ್ತಾಯಗೊಂಡಿದ್ದರಿಂದ ಪಾಲಿಕೆ ಮತ್ತು ಸಾರ್ವಜನಿಕರ ನಡುವೆ ಸಮನ್ವಯ ಸಾಧಿಸಲು ಪ್ರತಿ ವಾರ್ಡಿಗೆ ಒಬ್ಬ ಹಿರಿಯ ನೋಡೆಲ್ ಅಧಿಕಾರಿಯನ್ನಾಗಿ ನೇಮಿಸಲಾಗಿರುತ್ತದೆ. ಮಾನ್ಯ ಆಯುಕ್ತರವರ ತಿದ್ದುಪಡಿ ಕಛೇರಿ ಆದೇಶ ಸಂಖ್ಯೆ: ಬಿ(12)5/ಪಿಆರ್/35/2020-21 ದಿನಾಂಕ:02/10/2020 ರಂದು ಶ್ರೀ ಬಸವರಾಜ ವೈ. ಅಂಬಿಗೇರ ಸಹಾಯಕ ಕಾನೂನು ಅಧಿಕಾರಿ ರವರನ್ನು ವಾರ್ಡ ಸಂಖ್ಯೆ:130 ರ ಅತ್ತಿಗುಪ್ಪೆಯ ನೋಡೆಲ್ ಅಧಿಕಾರಿಯನ್ನಾಗಿ ನೇಮಿಸಲಾಗಿರುತ್ತದೆ.

ದಿನಾಂಕ:21/11/2020ರಂದು ಅಣಿವಾರ್ಯ ಕಾರ್ಯಗಳಿಂದ ವಾರ್ಡ್ ಕಮಿಟಿ ಸಭೆಯನ್ನು ನೆಡೆಸಲು ಸಾಧ್ಯವಾಗದೇ ಇರುವುದರಿಂದ ದಿನಾಂಕ:23/11/2020ರಂದು ನಿಗಧಿ ಪಡಿಸಿ ಸಭೆಯನ್ನು ನಡೆಸಲಾಗಿರುತ್ತದೆ.

ದಿನಾಂಕ:23/11/2020 ರಂದು ಅಧ್ಯಕ್ಷರು ವಾರ್ಡ ನೋಡೆಲ್ ಅಧಿಕಾರಿ ಶ್ರೀ ಬಸವರಾಜ ವೈ. ಅಂಬಿಗೇರ, ಶ್ರೀ ಕೃಷ್ಣಮೂರ್ತಿ, ಕಾರ್ಯದರ್ಶಿ ಹಾಗೂ ವಾರ್ಡನ ಸಹಾಯಕ ಅಭಿಯಂತರರು, ಶ್ರೀ ಮಾರುತಿ ಹಿರಿಯ ಆರೋಗ್ಯ ಪರಿವೀಕ್ಷಕರು ಸದಸ್ಯರುಗಳು ಮತ್ತು ವಾರ್ಡ ವ್ಯಾಪ್ತಿಯಲ್ಲಿನ ಸ್ಥಳಿಯ ಸಂಘ ಸಂಸ್ಥೆಗಳಾದ ಸ್ಕೈಲೈನ್ ಸಿಟಿ ಅಪಾರ್ಟಮೆಂಟ್ ಚೇರಮನ್ ರವರು ಸಭೆಯಲ್ಲಿ ಸದಸ್ಯರಾಗಿ ಭಾಗವಹಿಸಿರುತ್ತಾರೆ. ಅದಲ್ಲದೆ ಶ್ರೀಮತಿ ವಾಣಿ ಮಹಿಳಾ ಸದಸ್ಯರು ಮತ್ತು ನಾಗರೀಕರ ಪ್ರತಿನಿಧಿಯಾಗಿ ಸಭೆಯಲ್ಲಿ ಭಾಗವಿಸಿರುತ್ತಾರೆ.

**ಸಭೆಗೆ ಹಾಜರಾಗಿ ಭಾಗವಹಿಸಿದ ಸದಸ್ಯರು ಮತ್ತು ಸಾರ್ವಜನಿಕರ ವಿವರ:**

| ಕ್ರಮ ಸಂಖ್ಯೆ | ಅಧಿಕಾರಿಗಳು ಮತ್ತು ಸದಸ್ಯರುಗಳ ಹೆಸರು | ಪದನಾಮ | ಇಲಾಖೆ | ಹಾಜರಾತಿ |
|---|---|---|---|---|
| 1 | ಶ್ರೀ ಬಸವರಾಜ ವೈ. ಅಂಬಿಗೇರ | ನೋಡೆಲ್ ಅಧಿಕಾರಿ | ಸಹಾಯಕ ಕಾನೂನು ಅಧಿಕಾರಿ, ಕಾನೂನು ಕೋಶ | ಹಾಜರಾಗಿರುತ್ತಾರೆ. |

23/11/2020

| | | | | |
|---|---|---|---|---|
| 2 | ಶ್ರೀ ಕೃಷ್ಣಮೂರ್ತಿ | ಕಾರ್ಯದರ್ಶಿಗಳು | ಸಹಾಯಕ ಅಭಿಯಂತರರು ವಾರ್ಡ ನಂ.132 | ಹಾಜರಾಗಿರುತ್ತಾರೆ. |
| 3 | ಶ್ರೀ ಮಾರುತಿ ಪಿ. ಸೇಟ್ | ಸದಸ್ಯರು | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ ನಂ.132 | ಹಾಜರಾಗಿರುತ್ತಾರೆ. |
| 4 | ಶ್ರೀ ಬಿ. ಪ್ರಕಾಶ್ | ಸದಸ್ಯರು | ಕಂದಾಯ ಪರಿವೀಕ್ಷಕರು | ಹಾಜರಾಗಿರುತ್ತಾರೆ. |
| 5 | ಶ್ರೀಮತಿ ವಾಣಿ | ಸದಸ್ಯರು | ನಾಗರೀಕ ಪ್ರತಿನಿಧಿಗಳು | ಹಾಜರಾಗಿರುತ್ತಾರೆ. |
| 6 | ಶ್ರೀ.ಗಂಗಣ್ಣಯ್ಯ | ಸದಸ್ಯರು | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.132 | ಹಾಜರಾಗಿರುತ್ತಾರೆ. |
| 7 | ಶ್ರೀ ಸಿ.ಹೆಚ್.ಪೈ | ಸದಸ್ಯರು | ಚೇರಮನ್ ಸ್ಕೈಲೈನ್ ಸಿಟಿ ಅಪಾರ್ಟಮೆಂಟ್ | ಹಾಜರಾಗಿರುತ್ತಾರೆ. |
| 8 | ಡಾ॥ ಮಂಜುನಾಥ್ | ಸದಸ್ಯರು | ಆರೋಗ್ಯ ವೈದ್ಯಾಧಿಕಾರಿಗಳು | ಹಾಜರಾಗಿರುತ್ತಾರೆ. |
| 9 | ಶ್ರೀ.ಜಗನಾಥ್ | ಸದಸ್ಯರು | ಕಿರಿಯ ಅಭಿಯಂತರರು(ಬೆ ಸಕಾಂ) | ಹಾಜರಾಗಿರುತ್ತಾರೆ. |
| 10 | ಶ್ರೀ.ಎನ್.ಕೃಷ್ಣ ಮೂರ್ತಿ | ಸದಸ್ಯರು | ತೋಟಗಾರಿಕೆ ಇಲಾಖೆ, ಬಿಬಿಎಂಪಿ | ಹಾಜರಾಗಿರುತ್ತಾರೆ. |

ವಾರ್ಡ್ ಕಮೀಟಿ ಸಭೆಯನ್ನು ನಡೆಸುವ ಕುರಿತಾಗಿ ದಿನಾಂಕ:23-11-2020ರಂದು ಸಭೆಯ ಸೂಚನಾ ಪತ್ರವನ್ನು ಈ ಕೆಳಕಂಡ ಇಲಾಖೆಗಳಿಗೆ ಕಳುಹಿಸಿಕೊಡಲಾಗಿರುತ್ತದೆ. ಆದರೆ ಸದರಿ ಇಲಾಖೆಗಳಿಂದ ಯಾವುದೇ ಪ್ರತಿನಿಧಿ/ಸಿಬ್ಬಂದಿ ಹಾಜರಾಗಿರುವುದಿಲ್ಲ.

**ವಾರ್ಡ ಸಂಖ್ಯೆ:132 ಕ್ಕೆ ಸಂಬಂಧಪಟ್ಟಂತೆ ಗೈರು ಹಾಜರಾದ ಇತರೆ ಇಲಾಖೆಗಳ ವಿವರ**

| ಕ್ರಮ ಸಂಖ್ಯೆ | ಇಲಾಖೆ | ಹಾಜರಾತಿ |
|---|---|---|
| 1 | ಚಂದ್ರಾ ಲೇಔಟ್ ಪೋಲಿಸ್ ಠಾಣೆ | ಹಾಜರಾಗಿರುವುದಿಲ್ಲ. |
| 2 | ಚಂದ್ರಾ ಲೇಔಟ್ ಟ್ರಾಫೀಕ್ ಪೋಲಿಸ್ ಠಾಣೆ | ಹಾಜರಾಗಿರುವುದಿಲ್ಲ. |
| 3 | ವಿಜಯನಗರ ಪೋಲಿಸ್ ಠಾಣೆ | ಹಾಜರಾಗಿರುವುದಿಲ್ಲ. |
| 4 | ಸಹಾಯಕ ಕಾರ್ಯನಿರ್ವಾಹಕ | ಹಾಜರಾಗಿರುವುದಿಲ್ಲ. |

23/11/2020

| | | |
|---|---|---|
| | ಅಭಿಯಂತರರು (SWM) | |
| 5 | ಅರಣ್ಯಾಧಿಕಾರಿಗಳೂ (ದಕ್ಷಿಣ) | ಹಾಜರಾಗಿರುವುದಿಲ್ಲ. |
| 6 | ರಸ್ತೆ ಗುಂಡಿ ಮುಚ್ಚುವ ಗುತ್ತಿಗೆದಾರರು | ಹಾಜರಾಗಿರುವುದಿಲ್ಲ. |
| 7 | ಘನತ್ಯಾಜ್ಯ ನಿರ್ವಹಣೆ ಗುತ್ತಿಗೆದಾರರು | ಹಾಜರಾಗಿರುವುದಿಲ್ಲ. |
| 8 | ಬೀದಿ ದೀಪಗಳ ನಿರ್ವಹಣೆ ಗುತ್ತಿಗೆದಾರರು | ಹಾಜರಾಗಿರುವುದಿಲ್ಲ. |
| 9 | BWSSB ಇಲಾಖೆ ರವರು | ಹಾಜರಾಗಿರುವುದಿಲ್ಲ. |

ಸಭೆಯ ಪ್ರಾರಂಭಿಕ ಹಂತದಲ್ಲಿ ವಾರ್ಡ ಸಮಿತಿಯ ಅಧ್ಯಕ್ಷರು ಹಾಗೂ ಸಹಾಯಕ ಕಾನೂನು ಅಧಿಕಾರಿ ರವರು ದಿನಾಂಕ:07-11-2020 ರಂದು ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಮತ್ತು ಕೈಗೊಂಡ ಕ್ರಮಗಳ ಬಗ್ಗೆ ಚರ್ಚಿಸಲಾಯಿತು. ಈ ಹಿಂದೆ ಸಭೆಯ ನಡವಳಿಯನ್ನು ದಾಖಲಿಸಿರುವಂತೆ ಸಭೆಯಲ್ಲಿ ಓದಲಾಯಿತು.

ಈ ಹಿಂದಿನ ಸಭೆಯಲ್ಲಿ ಬೆಸಕಾಂ ಇಲಾಖೆಯವರು ಮರದ ರೆಂಬೆ-ಕೊಂಬೆಗಳನ್ನು ತೆರವುಗೊಳಿಸಿದ್ದನ್ನು ತಿಳಿಸಿರುತ್ತಾರೆ. ಆದರೆ ಸಂಪೂರ್ಣವಾಗಿ ತೆರವುಗೊಳಿಸಿರುವುದಿಲ್ಲವೆಂದು ಸದಸ್ಯರು ತಿಳಿಸಿರುತ್ತಾರೆ. ಅದೇ ರೀತಿಯಾಗಿ ಶ್ರೀ.ಸಿ.ಹೆಚ್.ಪೈ ರವರು ಸ್ಕೈ ಲ್ಯಾಂಡ್ ಅಪಾರ್ಟ್‌ಮೆಂಟ್‌ನ ಮುಂದುಗಡೆ ನಿಂತಿರುವ ವಿದ್ಯಾಸಾಗರ ಹೈ ಸ್ಕೂಲ್ ವ್ಯಾನ್ ಅನ್ನು ಪೊಲೀಸ್ ಇಲಾಖೆಯವರು ತೆರವುಗೊಳಿಸಿರುವುದನ್ನು ತಿಳಿಸಿರುತ್ತಾರೆ.

ವೆಂಕಟೇಶ್ವರ ಲೇಔಟ್‌ನಲ್ಲಿ ಅರಣ್ಯ ವಿಭಾಗದಿಂದ ಮರಗಳ ರೆಂಬೆ ಕೊಂಬೆಗಳನ್ನು ಕತ್ತರಿಸಿ (Trimming) ತೆರವುಗೊಳಿಸಿರುವುದನ್ನು ಮಹಿಳಾ ಸದಸ್ಯರು ಸಭೆಗೆ ತಿಳಿಸಿರುತ್ತಾರೆ.

1. **ಕೋವಿಡ್-19**: ವಿಷಯಕ್ಕೆ ಸಂಬಂಧಿಸಿದಂತೆ ಸಭೆಯಲ್ಲಿ ಹಾಜರಿದ್ದ ಹಿರಿಯ ಆರೋಗ್ಯ ಪರಿವೀಕ್ಷಕರು ವೈರಾಣು ಹರಡುವಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಕಾರ್ಯನಿರ್ವಹಣೆಗೆ ಸವಿಸ್ತಾರವಾಗಿ ತಿಳಿಸಿರುತ್ತಾರೆ. ಮುಂದುವರೆದು ವಾರ್ಡ್ ಪ್ರದೇಶದ ಸಾರ್ವಜನಿಕರಿಗೆ ಕೋವಿಡ್-19ರ ಪರೀಕ್ಷೆ ಹೆಚ್ಚು ಮಾಡುವಂತೆ ಸೂಚಿಸಲಾಯಿತು. ಪ್ರತಿದಿನ ಇದಲ್ಲದೇ ಹಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ವೈದ್ಯಾಧಿಕಾರಿಗಳು ಕೋರೊನ ಟೆಸ್ಟಿಂಗ್ ಕ್ಯಾಂಪ್ ನಡೆಸಲು ಗಾಳಿಆಂಜನೇಯ ದೇವಸ್ಥಾನ ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿಯ ಒಂದನೇ ಮಹಡಿಯನ್ನು ಆರೋಗ್ಯ ಇಲಾಖೆಗೆ ನೀಡಲು ಮತ್ತೊಮ್ಮೆ ಕೋರಿಕೊಂಡಿರುತ್ತಾರೆ.

   ಸದರಿರವರ ಮನವಿಯನ್ನು ಪತ್ರದ ಮುಖಾಂತರ ನೀಡಲು ಕೋರಲಾಗಿರುತ್ತದೆ. ಹಾಗೂ ಸಹಾಯಕ ಅಭಿಯಂತರರು ಆರೋಗ್ಯ ಇಲಾಖೆಯ ಮನವಿಯನ್ನು ಜಂಟಿ ಆಯುಕ್ತರು(ದಕ್ಷಿಣ)ರವರ ಆದೇಶಕ್ಕಾಗಿ ಕಳುಹಿಸಿಕೊಡಲು ಮತ್ತೊಮ್ಮೆ ಸೂಚಿಸಲಾಗಿರುತ್ತದೆ.

23/11/2020

ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ಮಟ್ಟದಲ್ಲಿ ಕೋರನಾ ಟೆಸ್ಟಿಂಗ್‌ನ್ನು ಪ್ರತಿದಿನ 60 ರಿಂದ 70 ಜನರಿಗೆ ಮಾಡಲಾಗುತ್ತಿರುವುದನ್ನು ತಿಳಿಸಿರುತ್ತಾರೆ. ಪಾಸಿಟೀವ್ ಪ್ರಕರಣಗಳು ತುಂಬಾ ಕಡಿಮೆ ಆಗಿರುವುದನ್ನು ಸಭೆಯ ಗಮನಕ್ಕೆ ತಂದಿರುತ್ತಾರೆ.

2. **ಘನತ್ಯಾಜ್ಯ ನಿರ್ವಹಣೆ:** ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರು ಘನತ್ಯಾಜ್ಯ ನಿರ್ವಹಣೆ ಬಗ್ಗೆ ಸಭೆಗೆ ಮಾಹಿತಿಯನ್ನು ನೀಡುತ್ತಾರೆ. ವಾರ್ಡ್‌ನಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮಾಡಲು ಸೂಚಿಸಲಾಯಿತು. ಮನೆಮನೆಗಳಿಂದ ಕಸ ಸಂಗ್ರಹಣೆ ಮಾಡಲು ಒಟ್ಟು ನಿಯೋಜಿಸಲಾಗಿರುವ ಪೌರಕಾರ್ಮಿಕರ ಸಂಖ್ಯೆಯನ್ನು ಮತ್ತು ಆಟೋ ಟಿಪ್ಪರ್‌ಗಳ ಕಾರ್ಯನಿರ್ವಹಿಸುವ ಸಂಖ್ಯೆಗಳನ್ನು ಕಾಲಕಾಲಕ್ಕೆ ವಾರ್ಡ್ ಮಟ್ಟದ ವಾಟ್ಸ್‌ಆಫ್ ಗ್ರೂಫ್‌ಗೆ ಹಾಕಲು ಈ ಹಿಂದಿನ ಸಭೆಯಲ್ಲಿ ತಿಳಿಸಿ ಸೂಚಿಸಲಾಗಿತ್ತು. ಆದರೆ ಕಿರಿಯ ಆರೋಗ್ಯ ಪರಿವೀಕ್ಷಕರು ಸದರಿ ಕಾರ್ಯವನ್ನು ಮಾಡಿರುವುದಿಲ್ಲ. ಆದ್ದರಿಂದ ವಾರ್ಡ್‌ನಲ್ಲಿ ದಿನಾಲು ಕೆಲಸಕ್ಕೆ ಹಾಜರಾಗುವ ಪೌರಕಾರ್ಮಿಕರ ಮತ್ತು ಟಿಪ್ಪರ್ ಸಂಖ್ಯೆಯನ್ನು ವಾಟ್ಸ್‌ಆಫ್ ಗ್ರೂಫ್‌ಗೆ ಹಾಕಲು ಸಭೆಯು ಸೂಚಿಸಿದೆ.

ಕಿರಿಯ ಆರೋಗ್ಯ ಪರಿವೀಕ್ಷಕರು ಮನೆಮನೆಗಳಿಂದ ಮತ್ತು ವಾಣಿಜ್ಯ ಸಂಕೀರ್ಣಗಳಿಂದ ತ್ಯಾಜ್ಯವನ್ನು ವಿಂಗಡಿಸಿ, ನೀಡುತ್ತಿರುವ ಬಗ್ಗೆ ಪ್ರತಿದಿನ ಪರಿಶೀಲಿಸಿ ಕ್ರಮಕೈಗೊಳ್ಳಲು ಸೂಚಿಸಲಾಯಿತು.

3. **ವಾರ್ಡ್ ಮಟ್ಟದ ಕಾಮಗಾರಿ:** ಸದಸ್ಯರಾದ ಶ್ರೀ.ಸಿ.ಹೆಚ್.ಪೈ ರವರು ಸ್ಕೈಲೈನ್ ಸಿಟಿ ಅಪಾರ್ಟಮೆಂಟ್ ಮುಂದಿನ ಪಾರ್ಕನಲ್ಲಿ ಶಿಥಿಲಾವಸ್ಥೆಯಲ್ಲಿರುವ ಪೇ & ಯುಸ್ ಶೌಚಾಲಯವನ್ನು ನವೀಕರಣಗೊಳಿಸಿ ಸಾರ್ವಜನಿಕರ ಉಪಯೋಗಕ್ಕೆ ಬಳಸಲು ಅವಕಾಶ ಕಲ್ಪಿಸಬೇಕೆಂದು ಕೋರಿಕೊಂಡಿರುತ್ತಾರೆ. ಇದಲ್ಲದೆ ಈ ಹಳೆಯ ಶೌಚಾಲಯದಲ್ಲಿ ಸಾರ್ವಜನಿಕರು ಹೋಗದೇ ರಸ್ತೆಯ ಬದಿಗಳಲ್ಲಿ ಮೂತ್ರ ವಿಸರ್ಜನೆ ಮಾಡುವುದನ್ನು ನಿಯಂತ್ರಿಸಲು ಕ್ರಮಕೈಗೊಳ್ಳಬೇಕೆಂದು ಕೋರಿರುತ್ತಾರೆ. ಸದರಿ ಸದಸ್ಯರ ಮನವಿಯನ್ನು ಪರಿಗಣಿಸಿ, ಸ್ಥಳ ಪರಿಶೀಲನೆ ಮಾಡಿ ಮುಂದೆ ಕ್ರಮಕೈಗೊಳ್ಳಲು ಸಹಾಯಕ ಅಭಿಯಂತರರು 132 ರವರಲ್ಲಿ ಈ ಹಿಂದಿನ ಸಭೆಯಲ್ಲಿ ಸೂಚಿಸಲಾಗಿತ್ತು. ಸಹಾಯಕ ಅಭಿಯಂತರರು ತಮಗೆ ವಹಿಸಿರುವ ಈ ಕೆಲಸವನ್ನು ನಿರ್ವಹಿಸಿರುವ ಬಗ್ಗೆ ವರದಿಯನ್ನು ಮುಂದಿನ ಸಭೆಗೆ ನೀಡಲು ಕೋರಿದೆ.

4. **ಅರಣ್ಯ ವಿಭಾಗ:** ಸಭೆಯಲ್ಲಿ ಹಾಜರಿದ್ದ ಸದಸ್ಯರಾದ ಶ್ರೀ ಸಿ.ಹೆಚ್.ಪೈ.ರವರು ವಿಲೇಜ್ ಹೈಪರ್ ದಿಂದ ಅಂತಿಮ ರಸ್ತೆ ರವರಿಗೂ ಬೆಳೆದ ಗಿಡಮರಗಳ ರೆಂಬೆಕೊಂಬೆಗಳನ್ನು ಕತ್ತರಿಸಲು ಕೋರಿಕೊಂಡಿರುತ್ತಾರೆ. ಏಕೆಂದರೆ ಮರಗಳು ರೆಂಬೆ ಕೊಂಬೆಗಳ ನೆರಳಿನಿಂದಾಗಿ ಬೀದಿ ದೀಪಗಳ ಬೆಳಕು ಸರಿಯಾಗಿ ಬೀಳುತ್ತಿಲ್ಲವೆಂದು ಈ ಹಿಂದಿನ ಸಭೆಯಲ್ಲಿ ತಿಳಿಸಿರುತ್ತಾರೆ. ಇದರ ಕುರಿತ್ತಾಗಿ ದಕ್ಷಿಣ ವಲಯದ ಅರಣ್ಯಾಧಿಕಾರಿಗಳೂ ಕ್ರಮವಹಿಸಲು ಕೋರಲಾಗಿರುತ್ತದೆ. ಮತ್ತೊಮ್ಮೆ ಸದರಿ ಸದಸ್ಯರು ಕ್ರಮವಹಿಸಲು ಕೋರಿಕೊಂಡಿರುತ್ತಾರೆ. ಹಾಗೂ ಗಿಡಮರಗಳ ಕೊಂಬೆಗಳನ್ನು ತೆರವುಗೊಳಿಸುವ ಸಂದರ್ಭದಲ್ಲಿ ಶ್ರೀ.ಸಿ.ಹೆಚ್.ಪೈ ರವರನ್ನು ಸಂಪರ್ಕಿಸಿ ಅವರ ಸಲಹೆಯನ್ನು ಪಡೆದು ವಿಷಯದಲ್ಲಿ ಕ್ರಮವಹಿಸಬಹುದಾಗಿರುತ್ತದೆಂದು ಅರಣ್ಯಾಧಿಕಾರಿಗಳಿಗೆ ಕೋರಿದೆ.

23/11/2020

5. **ವಾರ್ಡನಲ್ಲಿರುವ ಘುಟ್‌ಪಾತ್**:ಗಳನ್ನು ಒತ್ತುವರಿ ಮಾಡಿದ್ದರೆ ತೆರವುಗೊಳಿಸಲು ಹಾಗೂ ರಸ್ತೆಗುಂಡಿಗಳನ್ನು ಮುಚ್ಚಲು ಮತ್ತು ಅನಧೀಕೃತ ಜಾಹೀರಾತು ಫಲಕಗಳನ್ನು ತೆರವುಗೊಳಿಸಿ ಕ್ರಮಕೈಗೊಳ್ಳಲು ವಾರ್ಡ್ ಸಂಖ್ಯೆ:132ರ ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು.

6. **ಬೀದಿ ದೀಪಗಳ ನಿರ್ವಹಣೆ:** ಕುರಿತಂತೆ ಚರ್ಚಿಸಲಾಗಿ ಸ್ಕೈಲೈನ್ ಸಿಟಿ ಅಪಾರ್ಟಮೆಂಟ್ ನ ಎದುರುಗಡೆ ಇರುವ ಪಾರ್ಕ್‌ನ ಸುತ್ತಮುತ್ತ ಬೀದಿ ದೀಪಗಳನ್ನು ಅಳವಡಿಸಲು ಶ್ರೀ.ಸಿ.ಹೆಚ್.ಪೈ ರವರು ಕೋರಿಕೊಂಡಿರುತ್ತಾರೆ. ಆದರೆ ಇದರ ಸಿಬ್ಬಂದಿಗಳು ಹಾಗೂ ಅಧಿಕಾರಿಗಳು ಸಭೆಗೆ ಹಾಜರಾಗಿರುವುದಿಲ್ಲ. ಹಾಗೂ ಗುತ್ತಿಗೆದಾರರು ಹಾಜರಾಗಿರುವುದಿಲ್ಲ. ಮುಂದಿನ ಸಭೆಗೆ ಬೀದಿದೀಪ ನಿರ್ವಹಣೆ ಮಾಡುವ ಗುತ್ತಿಗೆದಾರರು ಸಭೆಗೆ ಹಾಜರಾಗುವಂತೆ ನೋಟಿಸ್ ನೀಡಲು ಕಾರ್ಯದರ್ಶಿರವರಿಗೆ ಸೂಚಿಸಲಾಯಿತು. ಹಾಗೂ ಇದರ ಕುರಿತಂತೆ ಮುಂದಿನ ಸಭೆಯ ಅವಧಿಯೊಳಗಾಗಿ ಬೀದಿ ದೀಪಗಳನ್ನು ಅಳವಡಿಸಲು ಬೀದಿ ದೀಪ ನಿರ್ವಹಣೆ ಮಾಡುವ ಅಭಿಯಂತರರಿಗೆ ಮತ್ತು ಗುತ್ತಿಗೆದಾರರಿಗೆ ಸೂಚಿಸಲಾಯಿತು.

   ಸ್ಕೈಲೈನ್ ಸಿಟಿ ಅಪಾರ್ಟಮೆಂಟ್ ನ ಶ್ರೀ.ಸಿ.ಹೆಚ್.ಪೈ ರವರು ಬೀದಿ ದೀಪಗಳನ್ನು ಕೆ.ಎಫ್.ಸಿ ಅಂಗಡಿ ಎದುರಿನ ರಸ್ತೆಯಲ್ಲಿ ಅಳವಡಿಸಲು ಕೋರಿಕೊಂಡಿರುತ್ತಾರೆ. ಇದರ ಕುರಿತ್ತಾಗಿ ಸಂಬಂಧಪಟ್ಟ ವಿದ್ಯುತ್ ಸಹಾಯಕ ಅಭಿಯಂತರರು ಮತ್ತು ಗುತ್ತಿಗೆದಾರರು ಕ್ರಮವಹಿಸಲು ಸೂಚಿಸಿದೆ.

7. **ಕಾನೂನು ಮತ್ತು ಸುವ್ಯವಸ್ಥೆ:** ಸಭೆಗೆ ಚಂದ್ರಾಬಡಾವಣೆ ಪೋಲಿಸ್ ಸ್ಟೇಷನ್ ನಿಂದ ಯಾವ ಅಧಿಕಾರಿಗಳು ಹಾಜರಾಗದೇ ಇರುವುದರಿಂದ ಮಾನ್ಯ ಪೋಲಿಸ್ ಸಬ್ ಇನ್ಸ್‌ಪೆಕ್ಟರ್ ಚಂದ್ರಾಬಡಾವಣೆ ರವರಿಗೆ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಕೋರಿದೆ.

8. **ರಸ್ತೆಯ ಗುಂಡಿ:** ಮುಚ್ಚುವ ಬಗ್ಗೆ ಚರ್ಚಿಸಲಾಯಿತು. ರಸ್ತೆಯ ಗುಂಡಿಗಳನ್ನು ಕಾಲಕಾಲಕ್ಕೆ ಗುರುತಿಸಿ ಮುಚ್ಚಲು ಕ್ರಮಕೈಗೊಳ್ಳಲಾಗುತ್ತಿದೆಂದು ಸಹಾಯಕ ಅಭಿಯಂತರರು ತಿಳಿಸಿರುತ್ತಾರೆ. ಸಭೆಗೆ ರಸ್ತೆ ಗುಂಡಿಯನ್ನು ಮುಚ್ಚಲು ಗುತ್ತಿಗೆ ಪಡೆದಿರುವ ಗುತ್ತಿಗೆದಾರರು ಹಾಜರಾಗಿರುವುದಿಲ್ಲ. ಮುಂದಿನ ವಾರ್ಡ ಸಮಿತಿ ಸಭೆಗೆ ತಪ್ಪದೆ ಹಾಜರಾಗಲು ಸೂಚಿಸಬೇಕೆಂದು ತಿಳಿಸಲಾಯಿತು.

9. BWSSB ಇಲಾಖೆಯವರು ವಾರ್ಡ್ ಮಟ್ಟದ್ದಲ್ಲಿ ಮಣ್ಣನ್ನು ಅಗೆದು ಹಾಗೆ ಬಿಟ್ಟಿರುವುದನ್ನು ತಿಳಿಸಲಾಗಿರುತ್ತದೆ. ಆದ್ದರಿಂದ ಸದರಿ ಇಲಾಖೆಯ ಸಹಾಯಕ ಅಭಿಯಂತರರು ಮತ್ತು ಗುತ್ತಿಗೆದಾರರು ಮಣ್ಣನ್ನು ತೆರವುಗೊಳಿಸಲು ಕೋರಲಾಗಿರುತ್ತದೆ.

   ಶ್ರೀ.ಸಿ.ನಾರಾಯಣ ಅಧ್ಯಕ್ಷರು ಚಂದ್ರಾಲೇಔಟ್ ರೆಸಿಡೆನ್ಸ್ ವೆಲ್ಫೇರ್ ಅಸೋಸಿಯೇಷನ್ಸ್ ರವರು ಚಂದ್ರಾಲೇಔಟ್ 80 ಅಡಿ ರಸ್ತೆ (ವಿನಾಯಕ ಆಸ್ಪತ್ರೆ ರಸ್ತೆ) ರಲ್ಲಿ ಒಳಚರಂಡಿ ಒಡೆದು ಡ್ರೈನೇಜ್‌ಗೆ ನೀರು ಹರಿದು ಬರುತ್ತಿದ್ದು ಹಾಗೂ ಮನೆಗಳಿಗೆ ವಾಸನೆ ಬರುತ್ತಿದೆ ಎಂದು ತಿಳಿಸುತ್ತಾ ಸರಿಪಡಿಸಲು ದಿನಾಂಕ:13/11/2020ರಂದು ವಾಟ್ಸ್ ಆಫ್ ಗ್ರೂಪ್‌ನಲ್ಲಿ ಮನವಿ ಸಲ್ಲಿಸಿರುತ್ತಾರೆ. ಸದರಿರವರ ಮನವಿಯನ್ನು ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದೆಂದು BWSSB ಅಧಿಕಾರಿಗಳು ತಿಳಿಸಿರುತ್ತಾರೆ.

[signature] 23/11/2020

ಈ ಹಿನ್ನೆಲೆಯಲ್ಲಿ ಸದರಿ ವಿಷಯದಲ್ಲಿ ಕ್ರಮವಹಿಸಿ ವರದಿ ಸಲ್ಲಿಸಲು BWSSB ಇಲಾಖೆರವರಿಗೆ ಸೂಚಿಸಿದೆ.

**10.** ವೆಂಕಟೇಶ್ವರ ಲೇಔಟ್‌ನಲ್ಲಿ ಖಾಲಿಯಿರುವ ಸಿ.ಎ ನಿವೇಶನವನ್ನು ಪಾಲಿಕೆ ವಶಕ್ಕೆ ಪಡೆದು ಘನತ್ಯಾಜ್ಯ ತೆರವುಗೊಳಿಸಿ ಪಾಲಿಕೆಯ ಉಪಯೋಗಕ್ಕೆ ಪಡೆಯಲು ಮಹಿಳಾ ಸದಸ್ಯರು ಕೋರಿಕೊಂಡಿರುತ್ತಾರೆ. ಸದರಿ ವಿಷಯದಲ್ಲಿ ಸಹಾಯಕ ಅಭಿಯಂತರರು ಮತ್ತು ಕಂದಾಯ ಪರಿವೀಕ್ಷಕರು ಪರಿವೀಕ್ಷಣೆ ಮಾಡಿ ಸೂಕ್ತ ಕ್ರಮಕೈಗೊಳ್ಳಲು ಸೂಚಿಸಿದೆ.

**11.** **ತೆರಿಗೆ:** ಸಭೆಯಲ್ಲಿ ಹಾಜರಿದ್ದ ಕಂದಾಯ ಪರಿವೀಕ್ಷಕರಿಗೆ ತೆರಿಗೆ ವಸೂಲಾತಿಯನ್ನು ಮಾಡಲು ಹಾಗೂ ಸುಸ್ತಿದಾರರಿಗೆ ನೋಟಿಸು ಜಾರಿ ಮಾಡಿ ವಸೂಲಾತಿ ಕ್ರಮಕೈಗೊಳ್ಳುವುದು ಹಾಗೂ ಕಂದಾಯ ವಸೂಲಾತಿ ಮಾಡುತ್ತಿರುವ ಬಗ್ಗೆ ವಿವರವನ್ನು ನೋಡೆಲ್ ಅಧಿಕಾರಿರವರಿಗೆ ವರದಿ ನೀಡಲು ಈ ಹಿಂದಿನ ಸಭೆಯಲ್ಲಿ ಸೂಚಿಸಲಾಗಿತ್ತು ಆದರೆ ಕಂದಾಯದ ವಿವರವನ್ನು ಸಲ್ಲಿಸಿರುವುದಿಲ್ಲ ಆದ್ದರಿಂದ ಮುಂದಿನ ಸಭೆಗೆ ಕಂದಾಯ ಪರಿವೀಕ್ಷಕರು ವಾರ್ಡ್ ಮಟ್ಟದಲ್ಲಿ ಸಂಗ್ರಹವಾಗುವ ತೆರಿಗೆ ವಿವರವನ್ನು ಸಭೆಗೆ ಸಲ್ಲಿಸಲು ಸೂಚಿಸಿದೆ.

ಸಭೆಯ ವಾರ್ಡ ಸಮಿತಿಯ ಅಧ್ಯಕ್ಷರು ವಾರ್ಡ ಮಟ್ಟದ ಎಲ್ಲ ಅಧಿಕಾರಿ ಮತ್ತು ಸಿಬ್ಬಂದಿಗಳ ನಡುವೆ ಸಮನ್ವಯ ಸಾಧಿಸಲು ವಾಟ್ಸ್ ಅಪ್ ಗ್ರೂಪ್‌ನ್ನು ಮಾಡಲಾಗಿದ್ದು, ಕಾಲಕಾಲಕ್ಕೆ ಆಯಾ ಸಂಬಂಧಪಟ್ಟ ಇಲಾಖೆ ಸಿಬ್ಬಂದಿ ಮತ್ತು ಅಧಿಕಾರಿಗಳ ಮಾಹಿತಿಯನ್ನು ಹಂಚಿಕೆ ಮಾಡಿಕೊಂಡು ಸಾರ್ವಜನಿಕ ಕುಂದುಕೊರತೆಗಳನ್ನು ಬಗೆಹರಿಸಿಕೊಂಡು ಕ್ರಮವಹಿಸಬೇಕೆಂದು ತಿಳಿಸಿರುತ್ತಾರೆ.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿ ಸ್ಪಂದಿಸಿ ಪರಿಹರಿಸಲು ಕ್ರಮತೆಗೆದುಕೊಂಡು ಆಯಾ ಸಂಬಂಧಪಟ್ಟ ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು. ಅಧ್ಯಕ್ಷರು ವಂದನಾರ್ಪಣೆ ಮಾಡಿ ಸಭೆಯನ್ನು ಮುಕ್ತಾಯಗೊಳಿಸಿದರು.

ಕಾರ್ಯದರ್ಶಿಗಳು
ವಾರ್ಡ ಸಂಖ್ಯೆ.132, ಅತ್ತಿಗುಪ್ಪೆ

23/11/2020
**ನೋಡೆಲ್ ಅಧಿಕಾರಿ**
ವಾರ್ಡ ಸಂಖ್ಯೆ,132, ಅತ್ತಿಗುಪ್ಪೆ